ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ನ ಪಂಗಡ).—ರೂರಲ್ ಡೆವಲಪ್‌ಮೆಂಟ್ ಫಂಡಿನಿಂದ ನೀರು ಸರಬರಾಯಿ ಬಾಬಿಗೆ ಕೊಟ್ಟಿರುವುದು ಸಾಲದೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ಎಷ್ಟು ಸಾಧ್ಯವೋ ಅಷ್ಟೂ ಒದಗಿಸುತ್ತೇವೆ. ಅನೇಕ ವರ್ಷಗಳಿಂದ ನಿಂತಿರುವ ಕೆಲಸಗಳೆಲ್ಲವನ್ನೂ ಒಂದೇ ವರ್ಷದಲ್ಲಿ ಮಾಡಲು ಸಾಧ್ಯವಿಲ್ಲ.

ಶ್ರೀ ಟಿ. ಹನುಮಯ್ಯನವರು.—ಒಂದೊಂದು ಜಿಲ್ಲೆಗೆ ಎಷ್ಟೆಷ್ಟು ಹಣ ಒದಗಿಸಿದ್ದೀರಿ ?

ಶ್ರೀ ಟಿ. ಮರಿಯಪ್ಪನವರು.—ಈಗ ತಾನೇ ಹೇಳಿದೆ.

ಶ್ರೀ ಟಿ. ಹನುಮಯ್ಯನವರು.—ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿಗಳ ಚೇರ್ಮನ್ನರುಗಳ ಹೆಸರಿಕೆ ನಿಮ್ನ ಪಂಗಡಕ್ಕೆ ಸೇರಿದವರೆಷ್ಟು ಮಂದಿ ?

ಶ್ರೀ ಟಿ. ಮರಿಯಪ್ಪನವರು.—ಇದಕ್ಕೆ ಸಂಬಂಧವಿಲ್ಲ.

ಶ್ರೀ ಎಸ್. ಹುಚ್ಚುಮಾಸ್ತಿಗೌಡರು (ತುಮಕೂರು ಜಿಲ್ಲೆ).—ಕೇಂದ್ರ ಡೆವಲಪ್‌ಮೆಂಟ್ ಸಮಿತಿ ಇನ್ನೂ ರಚನೆಯಾಗದೇ ಇರುವುದರಿಂದ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಸಮಿತಿಯು ಕೆಲಸಗಳಿಗೆ ತೊಂದರೆಯಾಗಿದೆಯೆಂಬುದು ಗೊತ್ತೆ ?

ಶ್ರೀ ಟಿ. ಮರಿಯಪ್ಪನವರು.—ಸ್ವಲ್ಪಮಟ್ಟಿಗೆ ತೊಂದರೆಯಾಗಿದೆಯೆಂದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎಸ್. ಹುಚ್ಚುಮಾಸ್ತಿಗೌಡರು.—ಇಷ್ಟು ದಿವಸವಾದರೂ ರಚನೆಮಾಡದೇಯಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಮರಿಯಪ್ಪನವರು.—ಈಗಾಗಲೇ ಸ್ಥಳೀಯ ಸಂಸ್ಥೆಗಳ ಇಂಟಿಗ್ರೇಷನ್ ಸಮಿತಿಯವರು ಅವರ ಕೆಲಸವನ್ನು ಮುಗಿಸುತ್ತಿದ್ದಾರೆಂದು ವರ್ತಮಾನ ಬಂದಿದೆ. ಅವರು ವರದಿ ಬಂದಮೇಲೆ ಇಷ್ಟರಲ್ಲೇ ಇತ್ಯರ್ಥವಾಗುತ್ತದೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗಾ ಜಿಲ್ಲೆ).—ಎಷ್ಟು ದಿನದಿಂದ ಈ ನೀತಿಯನ್ನು ಅನುಸರಿಸುತ್ತಿದ್ದೀರಿ ?

ಶ್ರೀ ಟಿ. ಮರಿಯಪ್ಪನವರು.—ಎಷ್ಟು ಅಗತ್ಯವಿದೆಯೋ ಅಷ್ಟು ದುಡ್ಡು ಕೊಡುತ್ತಿದ್ದೇವೆ. ದುಡ್ಡು ಇಲ್ಲದೇ ಕೆಲಸ ಮಾಡತಕ್ಕದ್ದು ಶೇಕಡ 75 ಭಾಗ ಇದೆ, ಜನಗಳು ಸಂಘಟಿತವಾಗತಕ್ಕದ್ದು, ಯೋಗಕ್ಷೇಮ ನೋಡಿಕೊಳ್ಳತಕ್ಕದ್ದು, ವ್ಯವಸಾಯಾಭಿವೃದ್ಧಿ ಮಾಡತಕ್ಕದ್ದು, ತಳಿ ಅಭಿವೃದ್ಧಿ ಮಾಡತಕ್ಕದ್ದು—ಇವೆಲ್ಲಾ ಇವೆ. ಸರ್ಕಾರದವರು ದುಡ್ಡು ಕೊಟ್ಟು ಅನೇಕ ಕೆಲಸಗಳನ್ನು ಮಾಡಿಸಿದ್ದೇವೆ. ಉದಾಹರಣೆಗೆ ಚರಂಡಿಗಳನ್ನು ಮಾಡಿಸಿದ್ದೇವೆ. ಅದರಲ್ಲಿ ಮಣ್ಣು ತುಂಬಿಕೊಂಡಿದೆ, ತೆಗೆಯುವವರೇ ಇಲ್ಲ.

ಶ್ರೀ ಎಲ್. ಸಿದ್ದಪ್ಪನವರು.—1945ರಲ್ಲಿ ಯಾವುದಕ್ಕೂ ಸರ್ಕಾರದವರೇ ಹೆಚ್ಚು ಹಣ ಖರ್ಚು ಮಾಡಬೇಕೆಂದು ಹೇಳಿದಿರಿ. ಆಗ ಅವರು ದುಡ್ಡು ಖರ್ಚುಮಾಡಬೇಕಾಗಿತ್ತು. ಈಗ ನೀವು ಅಧಿಕಾರಕ್ಕೆ ಬಂದ ಮೇಲೆ ಈ ರೀತಿ ದುಡ್ಡಿಲ್ಲದೇ ನಡೆಸಬೇಕಾಗಿದೆಯಲ್ಲವೇ ?

ಶ್ರೀ ಟಿ. ಮರಿಯಪ್ಪನವರು.—ದುಡ್ಡು ಕೊಟ್ಟೂ ಮಾಡಿಸಿದ್ದೇವೆ. ದುಡ್ಡು ಕೊಟ್ಟ ಮೇಲೆ ಇನಿಷಿಯೇಟೀವ್ ಅವರಿಗೆ ಬರಬೇಕು. ಏನೂ ದುಡ್ಡು ಕೊಡದೇ 10 ಸಾವಿರ 20 ಸಾವಿರ ರೂಪಾಯಿ ಕೆಲಸಮಾಡಿರುವ ಹಳ್ಳಿಗಳಿವೆ. ಕೋ-ಆಪರೇಟಿವ್ ಸೊಸೈಟಿಗಳಿಗೆ 300 ರೂಪಾಯಿ ಕೊಟ್ಟಿದ್ದರೂ ಅಭಿವೃದ್ಧಿಯಾಗುತ್ತಿಲ್ಲವೇ ?

ಶ್ರೀ ಎಲ್. ಸಿದ್ದಪ್ಪನವರು.—ಜನಗಳೇ ಮುಂದೆ ಬಂದು ಸರ್ಕಾರದವರ ಸಹಾಯ ಕೇಳದೇ, ಅವರೇ ಕೆಲಸಮಾಡಿಕೊಳ್ಳುವವರೆಗೂ ಬೇಕಾದಷ್ಟು ಹೊಬಲಗು ಕೊಡುತ್ತೀರಲ್ಲವೇ ?

ಶ್ರೀ ಟಿ. ಮರಿಯಪ್ಪನವರು.—ಕೊಡುತ್ತೇವೆ. ರೂರಲ್ ಡೆವಲಪ್‌ಮೆಂಟ್‌ಗೆ ಬಡ್ಜೆಟ್‌ನಲ್ಲಿ ಅರ್ಧ ಕೋಟಿ ರೂಪಾಯಿ ಗಳವರೆಗೂ ಹೋಗಿದೆ.

ಶ್ರೀ ಎಲ್. ಸಿದ್ದಪ್ಪನವರು.—ನಮಗೆ ಬೇಕಾಗಿರುವುದು ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳು, ಗ್ರಾಮಾಂತರ ಪ್ರದೇಶಗಳ ರಸ್ತೆ ಸೌಕರ್ಯ. ಇವುಗಳಿಗೆ ಗ್ರಾಂಟ್ ಕೊಡಬೇಕು. ಅದು ಕ್ರಮಕ್ರಮೇಣ ಕಡಿಮೆ ಆಗುತ್ತಾ ಇದೆ. 1948-49ನೇ ಸಾಲಿನಲ್ಲಿ ಸ್ವಲ್ಪ ಜಾಸ್ತಿ ಕೊಟ್ಟಿದ್ದೀರಿ. ಆಮೇಲೆ ಈಗ ಎರಡು ವರ್ಷದಿಂದ ಕಡಿಮೆಯಾಗುತ್ತಾ ಇದೆ. ಇದರಿಂದ ಜನಗಳಿಗೆ ಎಷ್ಟು ಸಹಾಯ ಸಿಕ್ಕಬೇಕೋ ಅಷ್ಟು ಸಹಾಯ ಸಿಕ್ಕದೇ ತೊಂದರೆಯಾಗುವುದಿಲ್ಲವೆ ?

ಶ್ರೀ ಟಿ. ಮರಿಯಪ್ಪನವರು.—ಕುಡಿಯುವ ನೀರಿನ ಬಾವಿಗಳನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. ಕೊಟ್ಟ ಹಣ ಖರ್ಚಾಗಿಲ್ಲ. ಯಾವ ಊರಿನವರು ಬಾವಿ ಪೂರ್ತಿ ಮಾಡುತ್ತೇವೆ ಎಂದು ಹೇಳುತ್ತಾರೋ ಅವರಿಗೆ ಇನ್ನೂ ಹೆಚ್ಚಿನ ಸಹಾಯಮಾಡುತ್ತೇವೆ. ಕುಡಿಯುವ ನೀರಿನ ಬಾವಿಗೆ ಯಾವಾಗಲೂ ಇಲ್ಲವೆಂದು ಹೇಳಿಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ತಾವು ಮಂಜೂರು ಮಾಡಿರುವ ಹಣದಲ್ಲಿ ಬಹಳ ಕಮ್ಮಿ ಖರ್ಚಾಗಿದೆ ಎಂದು ಗೊತ್ತಾಗುತ್ತದೆ. ಗ್ರಾಮಾಂತರಗಳಲ್ಲಿರತಕ್ಕ ಅತಿ ಮುಖ್ಯವಾದ ಈ ಅನುಕೂಲತೆಗಳನ್ನು ಒದಗಿಸುವುದಕ್ಕೆ ಹೆಚ್ಚು ಹೊಬಲಗು ಕೊಡುವ ಏರ್ಪಾಡು ಮಾಡುತ್ತೀರಾ ?

ಶ್ರೀ ಟಿ. ಮರಿಯಪ್ಪನವರು.—ಈಚೆಗೆ ಬಹಳ ಚೆನ್ನಾಗಿ ಕೆಲಸ ನಡೆಯುತ್ತಿದೆ ಎಂದು ಕೇಳಿದ್ದೇವೆ. ಎಷ್ಟು ಬೇಕಾದರೂ ಕೊಡುವುದಕ್ಕೆ ತಯಾರಾಗಿದ್ದೇವೆ.

Mr. SPEAKER.—Next question.

Multi-purpose Co-operative Societies and their activities.

*Q.—138.—Sri T. MADIAH GOWDA (Bangalore District—General).—

Will the Government be pleased to state :—

(*a*) the number of multi-purpose co-operative societies in each district;

(*b*) the number of shareholders and the share amount collected in each district;

(*c*) the commodities that are generally sold in these societies;

(*d*) all the activities that are now taken up by these societies ?

A.—Sri T. MARIAPPA (Home Minister).—

(*a*)

Bangalore District	...	114
Hassan ,,	...	84
Mandya ,,	...	79
Chikmagalur District	...	69
Mysore ,,	...	92
Shimoga ,,	...	83
Chitaldrug ,,	...	71
Tumkur ,,	...	105
Kolar ,,	...	128

(*b*)

District	*No. of Share-holders*	*Share amount* Rs.
Bangalore ...	27,519	3,93,929
Mandya ...	16,821	3,06,277
Mysore ...	18,433	2,72,832
Hassan ...	13,438	2,31,727
Chikmagalur ...	6,639	1,30,125
Shimoga ...	10,775	3,00,682
Chitaldrug ...	9,366	1,97,085
Tumkur ...	18,930	2,55,862
Kolar ...	22,732	3,82,656

(*c*) Nineteen.

(*d*) Sale of consumers goods and essential agricultural articles.

ಇದೂ ನಹ ಸೊಸೈಟಿಗಳ ವಿಷಯದಲ್ಲಿ ಹಾಕಿದ ಪ್ರಶ್ನೆಗೆ ಸಂಬಂಧಿಸಿದೆ.

ಶ್ರೀ ಟಿ. ಮಾದಯ್ಯಗೌಡರು.—ಇಲ್ಲ. (ಸಿ) ಮತ್ತು (ಬಿ) ಪ್ರಶ್ನೆಗಳು ಬೇರೆ ಆಗಿವೆ. ಸೊಸೈಟಿಗಳಲ್ಲಿ ವ್ಯಾಪಾರವಾಗುತ್ತಾ ಇರತಕ್ಕ ಪದಾರ್ಥಗಳು 19 ಎಂದು ಹೇಳಿದ್ದೀರಿ. ಇದರಲ್ಲಿ ಹತ್ತೋಟಿ ಆಜ್ಞೆಗೆ ಒಳಪಟ್ಟ ಪದಾರ್ಥಗಳೂ ಸೇರಿವೆಯೇ?

ಶ್ರೀ ಟಿ. ಮರಿಯಪ್ಪನವರು.—ಹತ್ತೋಟಿ ಆಜ್ಞೆಗೆ ಒಳಪಟ್ಟ ಸಾಮಾನಗಳೂ ಇವೆ. ಒಳಪಡದೇ ಇರುವ ಸಾಮಾನುಗಳೂ ಇವೆ.

ಶ್ರೀ ಟಿ. ಮಾದಯ್ಯಗೌಡರು.—ಹತ್ತೋಟಿ ಆಜ್ಞೆಗೆ ಒಳಪಟ್ಟ ಸಾಮಾನುಗಳನ್ನೂ ಹೆಚ್ಚಾಗಿ ಈ ಸೊಸೈಟಿಗಳ ಮೂಲಕ ವ್ಯಾಪಾರಮಾಡುತ್ತಿದ್ದಾರೆಯೇ?

ಶ್ರೀ ಟಿ. ಮರಿಯಪ್ಪನವರು.—ಹೌದು, ಮಾಡುತ್ತಿದ್ದಾರೆ.

ಶ್ರೀ ಟಿ. ಮಾದಯ್ಯಗೌಡರು.—ಹತ್ತೋಟಿ ಆಜ್ಞೆ ತೀರಿ ಹೋದ ಬಳಿಕ ಬಹುಶಃ ಆ ಪದಾರ್ಥಗಳ ವ್ಯಾಪಾರ ನಿಂತುಹೋಗಿ ಸೊಸೈಟಿಗಳ ಕೆಲಸ ಕಮ್ಮಿ ಯಾಗತಕ್ಕ ಸಂಭವ ಬರಬಹುದಲ್ಲವೇ?

ಶ್ರೀ ಟಿ. ಮರಿಯಪ್ಪನವರು.—ಅದು ಆಯಾಯಾ ಪ್ರದೇಶದಲ್ಲಿರತಕ್ಕ ಮಹನೀಯರ ಮೇಲೆ ಬಿದ್ದಿದೆ.

ಶ್ರೀ ಟಿ. ಮಾದಯ್ಯಗೌಡರು.—ಸರ್ವೇ ಸಾಧಾರಣವಾಗಿ ಹಳ್ಳಿಯವರಿಗೆ ಬೇಕಾದ ಯಾವ ಯಾವ ಸಾಮಾನುಗಳು ಇವೆಯೋ ಅವುಗಳನ್ನೆಲ್ಲಾ ಕಡ್ಡಾಯವಾಗಿ ಈ ಸೊಸೈಟಿಗಳವರು ಮಾರಾಟಮಾಡಬೇಕೆಂದು ಸರ್ಕಾರದವರು ಆಜ್ಞೆ ಹೊರಡಿಸಿದ್ದಾರೆಯೇ?

ಶ್ರೀ ಟಿ. ಮರಿಯಪ್ಪನವರು.—ಸೊಸೈಟಿಗಳಲ್ಲಿರತಕ್ಕವರು ದಕ್ಷರು. ಎಲ್ಲಾ ಪದಾರ್ಥಗಳನ್ನೂ ಮಾರುತ್ತಾರೆ ಎಂಬ ಉದ್ದೇಶದಿಂದ ಸರ್ಕಾರದವರು ಲಿಬರಲೈಸ್ ಮಾಡಿದ್ದಾರೆ. ಎಲ್ಲಾ ಸಾಮಾನುಗಳನ್ನೂ ಮಾರುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಆದರೆ ಪ್ರಾರಂಭದಲ್ಲಿ ಅನಾಹುತಗಳಾದೀತಲ್ಲಾ ದುರುಪಯೋಗವಾಗದೇ ಇರಲಿ, ಎಂದು ಎಚ್ಚರಿಕೆಯಿಂದ ಈ 19 ಪದಾರ್ಥಗಳನ್ನು ಮಾರಾಟಮಾಡಲಿ, ಆಮೇಲೆ ಹೆಚ್ಚು ಮಾಡಿಕೊಳ್ಳಲಿ ಎಂದು ಉದ್ದೇಶಪಟ್ಟಿದ್ದೇವೆ.

ಶ್ರೀ ಟಿ. ಮಾದಯ್ಯಗೌಡರು.—ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿಗಳವರು, ವ್ಯಾಪಾರಮಾಡುವುದಕ್ಕೆ ನಮ್ಮಲ್ಲರತಕ್ಕ ಹಣ ಸಾಲದು. ಆದ್ದರಿಂದ ಅಪೆಕ್ಸ್ ಬ್ಯಾಂಕ್‌ನಲ್ಲಿ ಸಾಲ ಕೊಡಿಸಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿದ್ದೇವೆ!

ಶ್ರೀ ಟಿ. ಮರಿಯಪ್ಪನವರು.—ಅಪೆಕ್ಸ್ ಬ್ಯಾಂಕ್ ನಿಂದ ಸಾಲ ಕೊಡಿಸಿಕೊಡಬೇಕೆಂದು ಅನೇಕ ಸೊಸೈಟಿಗಳವರು ಕಾರ್ಫರೆನ್ಸ್‌ಗಳಲ್ಲಿ ಕೇಳಿದ್ದಾರೆ!

ಶ್ರೀ ಟಿ. ಮಾದಯ್ಯಗೌಡರು.—ಅದಕ್ಕೆ ಏರ್ಪಾಡು ಮಾಡಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—ಅದು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಶ್ರೀ ಟಿ. ಮಾದಯ್ಯಗೌಡರು.—ಈ ಸೊಸೈಟಿಗಳಿಗೆ ಸೀಮೆಎಣ್ಣೆ ಲೀರಾಟ್ ಮಾಡಿರುವುದನ್ನು ಕೊಂಡು ಕೊಳ್ಳುವುದಕ್ಕೆ ಚೈತನ್ಯವಿಲ್ಲದೆ ಅಲಾಟ್‌ಮೆಂಟ್ ಕಡಿಮೆ ಮಾಡಿ ಸೀಮೆಎಣ್ಣೆ ಸಾಕಾದಷ್ಟು ಜನಗಳಿಗೆ ದೊರೆಯದಂತೆ ಆಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ!

ಶ್ರೀ ಟಿ. ಮರಿಯಪ್ಪನವರು.—ಬೇಕಾದಷ್ಟು ಸೀಮೆಎಣ್ಣೆ ಕೋಟಾ ಇದೆ. 3,000 ಟಿನ್ ಜಾಸ್ತಿ ಕೋಟಾ ಇದ್ದದ್ದನ್ನು ಹಾಪನದಿಂದ ಡೈವರ್ಟ್ ಮಾಡಿದ್ದೇವೆ. ಯಾರೂ ಕೊಂಡುಕೊಳ್ಳದೇ ಬಿಟ್ಟಿಲ್ಲ. ಕೆಲವರು ಒಂದು ತಿಂಗಳು ಅನಿವಾರ್ಯವಾಗಿ ಬಿಟ್ಟಿರಬಹುದು.

ಶ್ರೀ ಟಿ. ಮಾದಯ್ಯಗೌಡರು.—ಕೆಲವು ಸೀಮೆಎಣ್ಣೆ ಕಂಪೆನಿಯವರು ಮೈಸೂರು ದೇಶಕ್ಕೆ ಕೊಟ್ಟಿರುವ ಕೋಟಾ ಕೊಂಡುಕೊಳ್ಳುತ್ತಿಲ್ಲ. ಆದ್ದರಿಂದ ಬೇರೆ ಪ್ರಾಂತ್ಯಗಳಿಗೆ ಕೊಡುತ್ತೇವೆ ಎಂದು ಹೇಳಲಿಲ್ಲವೇ?

Mr. SPEAKER.—How does it arise?

ಶ್ರೀ ಟಿ. ಮಾದಯ್ಯಗೌಡರು.—ಹಳ್ಳಿಗಳಲ್ಲಿ ಉತ್ಪತ್ತಿಯಾಗತಕ್ಕ ಪದಾರ್ಥಗಳನ್ನು ಈ ಸೊಸೈಟಿಗಳಲ್ಲಿ ಕೊಂಡುಕೊಳ್ಳುವುದಕ್ಕೆ ಏನಾದರೂ ಏರ್ಪಾಡು ನಡೆಯುತ್ತ ಇದೆಯೇ?

ಶ್ರೀ ಟಿ. ಮರಿಯಪ್ಪನವರು.—ಹಳ್ಳಿಯಲ್ಲಿ ಉತ್ಪನ್ನವಾಗತಕ್ಕ ಮಾಲನ್ನು ಅಲ್ಲೇ ಮಾರಬೇಕೆಂಬುದೇ ಮುಖ್ಯ ಉದ್ದೇಶ. ಬೈರಾಸ್‌ನಲ್ಲೂ ಅದೇ ರೀತಿ ನಮೂದಿಸಲಾಗಿದೆ. ಯೂನಿಫಾರಂ ಬೈರಾಗಳನ್ನು ಕಳುಹಿಸಿ ಹಳ್ಳಿಗಳಲ್ಲಿ ಉತ್ಪನ್ನವಾಗತಕ್ಕ ಆಹಾರ ಪದಾರ್ಥಗಳಾಗಲೀ, ಕಮರ್ಷಿಯರ್ ಕ್ರಾಪ್ ಆಗಲೀ ಅಲ್ಲೇ ಮಾರಬೇಕೆಂದು ಮಾಡುವ ಉದ್ದೇಶವಿದೆ.

ಶ್ರೀ ಟಿ. ಮಾದಯ್ಯಗೌಡರು.—ಯಾವುದಾದರೂ ಸೊಸೈಟಿಗಳಲ್ಲಿ ಆ ರೀತಿ ಮಾಡಲಾಗುತ್ತಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಕೆಲವು ಸೊಸೈಟಿಗಳಲ್ಲಿ ಆ ರೀತಿ ಇದೆ. ಕುಣಿಗಲ್, ಮಂಡ್ಯ ಈ ಕಡೆಗಳಲ್ಲಿ ಇರುವ ಸೊಸೈಟಿಗಳನ್ನು ನೋಡಿದರೆ ನಿಮಗೆ ಅರ್ಥವಾಗುತ್ತದೆ.

Sri H. SIDDAVEERAPPA (Chitaldrug District—General).—With reference to the answer to (*c*) may I know what are these 19 commodities?

Sri T. MARIAPPA.—Agricultural implements, manures, seeds, cloth, kerosene oil, food grains, yarn, salt, matches, products of Government and other industrial concerns, sugar, coffee seeds, tur dhal, oil, soaps, Mysore paper, cement, iron and steel and zinc sheets.

Sri G. A. ACHARYA (Bangalore District—General).—In view of the fact that there are 700-800 multi-purpose co-operative societies, have the Government thought of introducing collective purchasing system?

Sri T. MARIAPPA.—The Provincial Marketing Society is doing that.

ಶ್ರೀ ಎ. ಜಿ. ಬಂದೀಗೌಡರು (ಮಂಡ್ಯ ಜಿಲ್ಲೆ).—ಈ 19 ಸಾಮಾನುಗಳಲ್ಲಿ ಸಕ್ಕರೆಯೂ ಸೇರಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಸೇರಿದೆ.

ಶ್ರೀ ಎ. ಜಿ. ಬಂದೀಗೌಡರು.—ಹತೋಟಿ ಆಜ್ಞೆ ಹೋದಮೇಲೂ ಸಕ್ಕರೆಯನ್ನು ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಮಾರಿಸುವುದಕ್ಕೆ ಪ್ರಯತ್ನಪಡುತ್ತೀರಾ?

ಶ್ರೀ ಟಿ. ಮರಿಯಪ್ಪನವರು.—ಸಕ್ಕರೆ ಕಂಪೆನಿಯವರು ಕೊಟ್ಟರೆ ಮಾರಿಸುತ್ತೇವೆ, ಫಸ್ಟ್‌ಕ್ಲಾಸ್ ಕನ್ಸ್‌ಮರುಗಳು ಸಿಕ್ಕುತ್ತಾರೆ.

ಶ್ರೀ ಎ. ಜಿ. ಬಂದೀಗೌಡರು.—ಸಕ್ಕರೆ ಕಂಪೆನಿಯರಿನರ್ಪ್ಯಡಿಪೋನಿಂದ ತೆಗೆದುಕೊಂಡು, ಮಲ್ಟಿಪರ್ಪಸ್ ಕೋ ಆಪರೇಟಿವ್ ಸೊಸೈಟಿಗಳಲ್ಲಿ ಮಾರಿಸುವುದರಿಂದ ಕಡಿಮೆ ಲಾಭ ಬರುವುದಿಲ್ಲವೇ?

ಶ್ರೀ ಟಿ. ಮರಿಯಪ್ಪನವರು.—ಪ್ರಾರಂಭದಲ್ಲೇ ಲಾರ್ಜ್ ಸ್ಕೇಲ್‌ನಲ್ಲಿ ಮಾರುವುದಕ್ಕೆ ಕಷ್ಟವಾಗುವುದರಿಂದ ಮೊದಲು ಮಂಡ್ಯದಲ್ಲಿ ಪ್ರಾರಂಭ ಮಾಡಿ ಆಮೇಲೆ ಇತರ ಕಡೆಗಳಲ್ಲೂ ಮುಂದುವರಿಸುತ್ತೇವೆ.

ಶ್ರೀ ಎ. ಜಿ. ಬಂದೀಗೌಡರು.—ನೇರವಾಗಿ ಕಂಪೆನಿಯವರಿಂದಲೇ ತೆಗೆದುಕೊಂಡರೆ ಹೆಚ್ಚು ಲಾಭ ಬರುತ್ತದೆ ಎಂದು ಗೊತ್ತೇ?

ಶ್ರೀ ಟಿ. ಮರಿಯಪ್ಪನವರು.—ಪ್ರಾರಂಭದಲ್ಲೇ ಲಾರ್ಜ್ ಸ್ಕೇಲ್‌ನಲ್ಲಿ ಮಾರುವುದಕ್ಕೆ ಲಾರಿ ಮಗ್ಗೆರೆ ಇಲ್ಲದೇ ಇರುವುದರಿಂದ ಕೆಲವು ಪದಾರ್ಥಗಳನ್ನು ಮಾತ್ರ ಮಾರಬೇಕೆಂದು ಮಾಡಿದ್ದೇವೆ.

ಶ್ರೀ ಎ. ಜಿ. ಬಂದೀಗೌಡರು.—ಅಂತೂ ಆ ರೀತಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಟಿ. ಮರಿಯಪ್ಪನವರು.—ಮೊದಲು ಮಂಡ್ಯಾ ಡಿಸ್ಟ್ರಿಕ್ಟ್‌ನ ಕೋ-ಆಪರೇಟಿವ್ ಸೊಸೈಟಿಯಲ್ಲಿ ಪ್ರಯೋಗ ರೂಪದಲ್ಲಿ ಮಾಡಿ ನೋಡಬೇಕೆಂಬ ಉದ್ದೇಶ ಎದೆ.

Lift Irrigation Scheme at Velambige.

*Q.—148. **Sri S. C. SOORYANARAYANA CHETTY** (Hassan District—General).—

Will the Government be pleased to state :—

(*a*) whether a lift irrigation scheme at Velambige, Hole-Narsipur Taluk, was proposed;

(*b*) how many acres of land would be under irrigation under that scheme;

(*c*) what the cost of the scheme will be;

(*d*) when the scheme will be put into practice in view of "Grow More Food"?

A.—**Sri T. MARIAPPA** (Home Minister).—

(*a*) Yes.

(*b*) About 600 acres.

(*c*) The preliminary estimate, excluding cost of transmission, is got up for Rs. 1,14,000 and the estimate in all respects is expected to cost Rs. 2,00,000 nearly.

(*d*) Two Lift Irrigation Schemes, one at Neelasoge and the other at Harihar have been taken up as experimental measures. In case the raiyats co-operate and are definitely enthusiastic about the same, the scheme will be taken up in 1950-51.

ಶ್ರೀ ಎಸ್. ಸಿ. ಸೂರ್ಯನಾರಾಯಣ ಶೆಟ್ಟರು.—ನನ್ನ ಪ್ರಶ್ನೆಯ (ಎ) ಭಾಗಕ್ಕೆ ತಾವು ಉತ್ತರವಾಗಿ "Yes" ಎಂದು ತಿಳಿಸಿದ್ದೀರಿ, ಆ ಯೋಜನೆಯನ್ನು ತಾವು ಯಾವಾಗ ಮಂಜೂರು ಮಾಡುತ್ತೀರಿ?

*ಶ್ರೀ ಟಿ. ಮರಿಯಪ್ಪನವರು.—ಆ ವಿಚಾರ ನಮ್ಮ ಗಮನಕ್ಕೆ ಬಂದು ಇನ್ನೂ ಸ್ವಲ್ಪ ದಿನಗಳಾಯಿತು. ಅದು ಫೈನಲ್ ಸ್ಟೇಜ್‌ಗೆ ಬರಲು ಇನ್ನೂ ಪರಿಶೀಲನೆ ನಡೆಯುತ್ತಿದೆ. It is under scrutiny.

ಶ್ರೀ ಎಸ್. ಸಿ. ಸೂರ್ಯನಾರಾಯಣ ಶೆಟ್ಟರು.—ಈ ವಿಷಯದಲ್ಲಿ ಅಷ್ಟೊಂದು ಸಾವಕಾಶ ಏಕಾಯಿತು?

ಶ್ರೀ ಟಿ. ಮರಿಯಪ್ಪನವರು.—ಈ ಬಗ್ಗೆ ಸಾವಕಾಶ ವೇನೂ ಆಗುವುದಿಲ್ಲ. 1949-50ಕ್ಕೆ ಕೇಂದ್ರ ಸರ್ಕಾರದವರ ಸಹಾಯ ಪಡೆಯಲಾಗಿತ್ತು. ಈಗ ಈ ವರ್ಷಕ್ಕೆ ಅವರ ಸಹಾಯವನ್ನೇ ನಿರೀಕ್ಷಿಸುತ್ತಿರಲಾಗಿದೆ. ತಮ್ಮ ವಿಚಾರ ಬಂದು 2½ ಅಥವಾ 3 ತಿಂಗಳಾಗಿರಬಹುದು.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಈ ತಾಲ್ಲೂಕಿನಿಂದ ಈ ಬಗ್ಗೆ ಬೇರೆ ಯಾರಿಂದಲಾದರೂ ಅರ್ಜಿಗಳು ತಮಗೆ ಬಂದಿವೆಯೇ!

ಶ್ರೀ ಟಿ. ಮರಿಯಪ್ಪನವರು.—ಹೇಮಾವತಿ ನದಿ ದಡದಲ್ಲಿರುವ ಕೆಲವು ರೈತರಿಂದ ಅರ್ಜಿಗಳು ಬಂದಿರುತ್ತವೆ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಈ ಲಿಫ್ಟ್ ಇರಿಗೇಷನ್ನನ್ನು ಎಲ್ಲಾ ಕಡೆಯೂ ಜಾರಿಗೆ ತರಲಾಗುತ್ತದೆಯೇ?

ಶ್ರೀ ಟಿ. ಮರಿಯಪ್ಪನವರು.—ಎಲ್ಲೆಲ್ಲಿ ನೀರಿನ ಸೌಕರ್ಯ ಮತ್ತು ಪವರ್ ಇದೆಯೋ ಅಲ್ಲೆಲ್ಲ ಇದನ್ನು ಆಡರಣೆಗೆ ತರಬೇಕೆಂಬುದೇ ಸರ್ಕಾರದವರ ಉದ್ದೇಶ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಅಲ್ಲಿನವರಿಗೆ ಮಳೆ ಕಡಿಮೆಯೆಂಬುದು ತಮಗೆ ಗೊತ್ತಿದೆಯೇ!

Sri T. MARIAPPA.—I want notice.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಆ ದೃಷ್ಟಿಯಿಂದಲಾದರೂ ಈ ಯೋಜನೆಯನ್ನು ಅಲ್ಲಿ ಜಾಗ್ರತೆಯಾಗಿ ಜಾರಿಗೆ ಕೊಡುತ್ತೀರಾ?

ಶ್ರೀ ಟಿ. ಮರಿಯಪ್ಪನವರು.—ಎಲ್ಲೆಲ್ಲಿ ನೀರಿನ ಮತ್ತು ಪವರ್‌ನ ಸೌಕರ್ಯವಿದ್ದು ರೈತರು ಅದನ್ನು ಸದುಪಯೋಗಪಡಿಸಿಕೊಂಡು, ಕಷ್ಟಪಟ್ಟು ಕೆಲಸ ಮಾಡುತ್ತೇವೆಂದು ಕೇಳುತ್ತಾರೋ ಅಂಥವರಿಗೆಲ್ಲಾ ಇದರ ಉಪಯೋಗವನ್ನು ಒದಗಿಸಬೇಕೆಂಬುದೇ ಸರ್ಕಾರದವರ ಉದ್ದೇಶ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—In answer to (d) "in case the raiyats co-operate and are definitely enthusiastic about the same, the scheme will be taken up in 1950-51" ಎಂದು ತಿಳಿಸಿದ್ದೀರಿ. ಹಾಗಾದರೆ ರೈತರಿಗೆ ಈ ಬಗ್ಗೆ ಸಾಕಷ್ಟು ಉತ್ತೇಜನ ಎಲ್ಲವೆಂಬುದು ತಮ್ಮ ಭಾವನೆಯೇ?

ಶ್ರೀ ಟಿ. ಮರಿಯಪ್ಪನವರು.—ಹಾಗಲ್ಲ ಎರಡು ಬೆಳೆಯನ್ನು ತೆಗೆಯುವಂಥ ರೈತರಿಗೆ ಮೊದಲು ಅವ